ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 435
2. ಮಾನ್ಯ ಸದಸ್ಯರ ಹೆಸರು : ಶ್ರೀ ಜಿ. ರಘು ಆಚಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
3. ಉತ್ತರಿಸಬೇಕಾದ ದಿನಾಂಕ : 09/12/2020
4. ಉತ್ತರಿಸುವವರು : ಮಾನ್ಯ ಕಾರ್ಮಿಕ ಮತ್ತು ಸಕ್ಕರೆ ಸಚಿವರು

ಕ್ರಮ ಸಂಖ್ಯೆ	ಪ್ರಶ್ನೆ	ಉತ್ತರ
ಅ)	ಕೋವಿಡ್–19 ರ ಸಮಯದಲ್ಲಿ ಸಂಕಷ್ಟಗೊಳಗಾದ ವಿವಿಧ ಸಮುದಾಯಗಳ ಅಸಂಘಟಿತ ಕಾರ್ಮಿಕ ವಲಯದವರಿಗೆ ಸರ್ಕಾರದ ವತಿಯಿಂದ ಘೋಷಿಸಲಾದ ಆರ್ಥಿಕ ಸಹಾಯ ಕಾರ್ಯಕ್ರಮಗಳು ಯಾವುವು: ರಾಜ್ಯದಲ್ಲಿ ಇವುಗಳು ಜಾರಿಗೊಂಡಿದೆಯೇ: (ಜಿಲ್ಲಾವಾರು ಮಾಹಿತಿ ಒದಗಿಸುವುದು)	ಕೋವಿಡ್–19 ರ ಸಮಯದಲ್ಲಿ ಸಂಕಷ್ಟಗೊಳಗಾದ ವಿವಿಧ ಸಮುದಾಯಗಳ ಅಸಂಘಟಿತ ಕಾರ್ಮಿಕ ವಲಯದವರಿಗೆ ಕಾರ್ಮಿಕ ಇಲಾಖೆಯ ವಿವಿಧ ಮಂಡಳಿಗಳ ಮೂಲಕ ಸರ್ಕಾರದ ವತಿಯಿಂದ ಘೋಷಿಸಲಾದ ಆರ್ಥಿಕ ಸಹಾಯ ಕಾರ್ಯಕ್ರಮಗಳನ್ನು ಜಾರಿಗೊಳಿಸಲಾಗಿದೆ. **<u>ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿ:–</u>** ಸನ್ಮಾನ್ಯ ಮುಖ್ಯಮಂತ್ರಿಯವರು ಕೋವಿಡ್–19ರ ಲಾಕ್‌ಡೌನ್ ಜಾರಿಗೊಳಿಸಿದ ಹಿನ್ನೆಲೆಯಲ್ಲಿ ಸಂಕಷ್ಟಕ್ಕೊಳಗಾದ ರಾಜ್ಯದ ಅಗಸರು ಹಾಗೂ ಕ್ಷೌರಿಕ ವೃತ್ತಿಯಲ್ಲಿ ತೊಡಗಿರುವ ಅಸಂಘಟಿತ ವಲಯದ ಕಾರ್ಮಿಕರಿಗೆ ರೂ.5000/–ಗಳ ಒಂದು ಬಾರಿ ನೆರವಿನ ವಿಶೇಷ ಪ್ಯಾಕೇಜ್ ಅನ್ನು ಘೋಷಿಸಿದ್ದು, ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿಯ ಮೂಲಕ ಜಾರಿಗೊಳಿಸಲಾಗುತ್ತಿದೆ. ಈವರೆಗೆ ಅಗಸ ವೃತ್ತಿಯಲ್ಲಿ ತೊಡಗಿರುವ 64176 ಹಾಗೂ ಕ್ಷೌರಿಕ ವೃತ್ತಿಯಲ್ಲಿ ತೊಡಗಿರುವ 55466 ಕಾರ್ಮಿಕರು ಸೇರಿದಂತೆ ಒಟ್ಟು 1,19,642 ಅರ್ಜಿದಾರರಿಗೆ ತಲಾ ರೂ.5,000/– ದಂತೆ ಒಟ್ಟು ರೂ.59.82 ಕೋಟಿಗಳ ನೆರವನ್ನು ವಿತರಿಸಲಾಗಿದೆ. (ಜಿಲ್ಲಾವಾರು ಮಾಹಿತಿಯನ್ನು **ಅನುಬಂಧ–1**ರಲ್ಲಿ ಒದಗಿಸಿದೆ). **<u>ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ</u>** 1. ಸರ್ಕಾರದ ಘೋಷಣೆಯಂತೆ ಪ್ರತಿ ನೋಂದಾಯಿತ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರಿಗೆ ತಲಾ ರೂ.5,000/– ಗಳಂತೆ ಒಟ್ಟು 16,48,431 ಫಲಾನುಭವಿಗಳಿಗೆ ರೂ. 824.22 ಕೋಟಿ ಸಹಾಯ ಧನವನ್ನು ಫಲಾನುಭವಿಗಳ ಬ್ಯಾಂಕ್ ಖಾತೆಗಳಿಗೆ ಜಮಾ ಮಾಡಲಾಗಿರುತ್ತದೆ. (ಜಿಲ್ಲಾವಾರು ಮಾಹಿತಿಯನ್ನು **ಅನುಬಂಧ–2** ರಲ್ಲಿ ನೀಡಿದೆ)

		2. ಕಟ್ಟಡ ಮತ್ತು ವಲಸೆ ಕಟ್ಟಡ ಕಾರ್ಮಿಕರಿಗೆ ಕೋರೋನಾ ವೈರಸ್ ಬಗ್ಗೆ ಅರಿವು ಮೂಡಿಸಲು ಹಾಗೂ ಮಾಸ್ಕ್, ಸ್ಯಾನಿಟೈಸರ್ ಹಾಗೂ ಸೋಪುಗಳನ್ನು ಕಾರ್ಮಿಕರಿಗೆ ವಿತರಣೆ ಮಾಡಲು 41 ಉಪ ವಿಭಾಗ ಮಟ್ಟದ ಕಾರ್ಮಿಕ ಅಧಿಕಾರಿಗಳಿಗೆ ತಲಾ ರೂ.10 ಲಕ್ಷಗಳನ್ನು ಬಿಡುಗಡೆ ಮಾಡಲಾಗಿರುತ್ತದೆ. 3. ಮಂಡಳಿಯ ವತಿಯಿಂದ ಬೆಂಗಳೂರಿನಲ್ಲಿ ಸ್ಥಾಪಿಸಲಾಗಿದ್ದ 10 ಶಿಶುಪಾಲನಾ ಕೇಂದ್ರಗಳಲ್ಲಿನ ಮಕ್ಕಳಿಗಾಗಿ Packed Nutrition Food & Toys ಗಳನ್ನು ಪೋಷಕರ ಮನೆಗಳಿಗೆ ತಲುಪಿಸಲಾಗಿರುತ್ತದೆ. 4. ಕಟ್ಟಡ ಮತ್ತು ವಲಸೆ ಕಟ್ಟಡ ಕಾರ್ಮಿಕರಿಗೆ ಆಹಾರ ಒದಗಿಸಲು ಮತ್ತು ಅವರ ಸಮಸ್ಯೆಗಳನ್ನು ಆಲಿಸಲು 24*7 ಸಹಾಯವಾಣಿ (155214) ಯನ್ನು ಸ್ಥಾಪಿಸಲಾಗಿರುತ್ತದೆ. 5. ವಸತಿ ರಹಿತ ಕಟ್ಟಡ ಮತ್ತು ವಲಸೆ ಕಟ್ಟಡ ಕಾರ್ಮಿಕರಿಗೆ ಜಿಲ್ಲಾಡಳಿತದ ಸಹಕಾರದೊಂದಿಗೆ ವಸತಿ ಸೌಲಭ್ಯ ಮತ್ತು ಊಟವನ್ನು ಒದಗಿಸಲಾಗಿರುತ್ತದೆ. 6. ತಯಾರಿಸಿದ ಆಹಾರದ ಪ್ಯಾಕೆಟ್‌ಗಳು ಮತ್ತು ಒಣ ದಿನಸಿ ಕಿಟ್‌ಗಳನ್ನು ಕಟ್ಟಡ ಮತ್ತು ವಲಸೆ ಕಾರ್ಮಿಕರಿಗೆ ವಿತರಿಸಲಾಗಿರುತ್ತದೆ.
ಆ)	ಸದರಿ ಕಾರ್ಯಕ್ರಮಗಳಿಗೆ ಸರ್ಕಾರ ಬಿಡುಗಡೆ ಮಾಡಿರುವ ಅನುದಾನ ಎಷ್ಟು : ಅದರಲ್ಲಿ ಹಂಚಿಕೆಯಾಗಿರುವ ಹಣವೆಷ್ಟು? (ಮಾಹಿತಿ ಒದಗಿಸುವುದು)	**<u>ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿ:-</u>** ಸದರಿ ಕಾರ್ಯಕ್ರಮದ ಅನುಷ್ಠಾನಕ್ಕಾಗಿ ಸರ್ಕಾರದಿಂದ ರೂ.67.69 ಕೋಟಿಗಳ ಅನುದಾನವನ್ನು ಬಿಡುಗಡೆಗೊಳಿಸಿದ್ದು, ಅದರಲ್ಲಿ ರೂ.59.82 ಕೋಟಿಗಳ ಮೊತ್ತವನ್ನು ವೆಚ್ಚಮಾಡಲಾಗಿದೆ. **<u>ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ:-</u>** ಮಂಡಳಿಯಿಂದ ಒದಗಿಸಲಾದ ಸೌಲಭ್ಯಗಳ ವಿತರಣೆಗಾಗಿ ಮಂಡಳಿಯಲ್ಲಿ ಲಭ್ಯವಿರುವ ಸುಂಕ ನಿಧಿಯಿಂದ ಹಾಗೂ ಸರ್ಕಾರದಿಂದ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿಗೆ ಬಿಡುಗಡೆಯಾದ ರೂ.5.00 ಕೋಟಿಗಳ ಮೊತ್ತವನ್ನು ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಗೆ ವರ್ಗಾಯಿಸಲಾಗಿದ್ದು, ಸದರಿ ಮೊತ್ತವನ್ನು ಒಳಗೊಂಡಂತೆ ಒಟ್ಟು ರೂ.911.18 ಕೋಟಿಯಷ್ಟು ಖರ್ಚು ಮಾಡಲಾಗಿರುತ್ತದೆ.

ಕಾಇ 405 ಎಲ್‌ಇಟಿ 2020

(ಅರಬೈಲ್ ಶಿವರಾಂ ಹೆಬ್ಬಾರ್)
ಕಾರ್ಮಿಕ ಮತ್ತು ಸಕ್ಕರೆ ಸಚಿವರು

ಅನುಬಂಧ-1

ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿ

ಅಗಸ ಮತ್ತು ಕ್ಷೌರಿಕ ವೃತ್ತಿಯಲ್ಲಿ ತೊಡಗಿರುವ ಕಾರ್ಮಿಕರ ಒಂದು ಬಾರಿ ಸಹಾಯ ಧನ ಪಡೆದ ಫಲಾನುಭವಿಗಳ ಜಿಲ್ಲಾವಾರು ವಿವರ:-

ಕ್ರ.ಸಂ.	ಜಿಲ್ಲೆಯ ಹೆಸರು	ಕ್ಷೌರಿಕ	ಅಗಸ	ಒಟ್ಟು	Amount Rs.5000/-each
1	ಬಾಗಲಕೋಟೆ	1986	911	2897	**14485000**
2	ಬಳ್ಳಾರಿ	2600	6386	8986	**44930000**
3	ಬೆಳಗಾವಿ	4626	2413	7039	**35195000**
4	ಬೆಂಗಳೂರು ಗ್ರಾಮಾಂತರ	1148	1077	2225	**11125000**
5	ಬೆಂಗಳೂರು ನಗರ	5135	5071	10206	**51030000**
6	ಬೀದರ್	1461	1290	2751	**13755000**
7	ಚಾಮರಾಜನಗರ	841	2669	3510	**17550000**
8	ಚಿಕ್ಕಬಳ್ಳಾಪುರ	1834	2560	4394	**21970000**
9	ಚಿಕ್ಕಮಗಳೂರು	830	464	1294	**6470000**
10	ಚಿತ್ರದುರ್ಗ	1479	3136	4615	**23075000**
11	ದಕ್ಷಿಣ ಕನ್ನಡ	880	299	1179	**5895000**
12	ದಾವಣಗೆರೆ	1438	2200	3638	**18190000**
13	ಧಾರವಾಡ	1904	1910	3814	**19070000**
14	ಗದಗ	1587	1131	2718	**13590000**
15	ಹಾಸನ	1496	1735	3231	**16155000**
16	ಹಾವೇರಿ	1716	2048	3764	**18820000**
17	ಕಲಬುರ್ಗಿ	3056	1922	4978	**24890000**
18	ಕೊಡಗು	350	207	557	**2785000**
19	ಕೋಲಾರ	2025	2031	4056	**20280000**
20	ಕೊಪ್ಪಳ	1927	2027	3954	**19770000**
21	ಮಂಡ್ಯ	1995	3670	5665	**28325000**
22	ಮೈಸೂರು	2877	4523	7400	**37000000**
23	ರಾಯಚೂರು	2247	4832	7079	**35395000**
24	ರಾಮನಗರ	906	1159	2065	**10325000**
25	ಶಿವಮೊಗ್ಗ	1346	707	2053	**10265000**
26	ತುಮಕೂರು	2183	4032	6215	**31075000**
27	ಉಡುಪಿ	933	278	1211	**6055000**
28	ಉತ್ತರ ಕನ್ನಡ	845	605	1450	**7250000**
29	ವಿಜಯಪುರ	2569	1187	3756	**18780000**
30	ಯಾದಗಿರಿ	1246	1696	2942	**14710000**
	ಒಟ್ಟು	**55466**	**64176**	**119642**	**598210000**

ಅನುಬಂಧ-2

ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ

ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯಿಂದ ನೋಂದಾಯಿತ ಕಟ್ಟಡ ಕಾರ್ಮಿಕರಿಗೆ ಕೋವಿಡ್-19 ಹಿನ್ನಲೆಯಲ್ಲಿ ರೂ.5000/- ಗಳ ಸಹಾಯಧನವನ್ನು ಪಾವತಿಸಿರುವ ಜಿಲ್ಲಾವಾರು ವಿವರ

ಕ್ರ.ಸಂ	ಜಿಲ್ಲೆ	ಮಂಡಳಿಯಿಂದ ಡಿಬಿಟಿ ಆಧಾರ್ ಮೂಲಕ ಪಾವತಿಸಿದ ಕಾರ್ಮಿಕರ ಸಂಖ್ಯೆ	ಮಂಡಳಿಯಿಂದ ಎನ್ಇಎಫ್‌ಟಿ ಮೂಲಕ ಪಾವತಿಸಿದ ಕಾರ್ಮಿಕರ ಸಂಖ್ಯೆ	ಕಾರ್ಮಿಕ ಅಧಿಕಾರಿಗಳಿಂದ ಪಾವತಿ ಮಾಡಲಾದ ಕಾರ್ಮಿಕರ ಸಂಖ್ಯೆ
1	ಬಾಗಲಕೋಟೆ	15579	3393	10555
2	ಬೆಳಗಾವಿ	41674	11281	17026
3	ಬಳ್ಳಾರಿ	45372	4036	33433
4	ಬೆಂಗಳೂರು	36357	5378	42032
5	ಬೀದರ್	43651	5117	22846
6	ಬಿಜಾಪುರ	17613	3773	24239
7	ಚಾಮರಾಜನಗರ	40290	1117	13252
8	ಚಿಕ್ಕಬಳ್ಳಾಪುರ	15980	1031	6735
9	ಚಿಕ್ಕಮಗಳೂರು	19550	9040	6139
10	ಚಿತ್ರದುರ್ಗ	60049	3927	14556
11	ದಾವಣಗೆರೆ	58869	3194	22245
12	ಗದಗ	11999	5102	6748
13	ಹಾಸನ	54320	3401	15182
14	ಹಾವೇರಿ	13247	11138	19991
15	ಹುಬ್ಬಳ್ಳಿ	48299	7813	20973
16	ಕಲಬುರಗಿ	40707	6335	37875
17	ಕಾರವಾರ	47485	13792	17664
18	ಕೋಲಾರ	44575	726	21288
19	ಕೊಪ್ಪಳ	65794	5757	5348
20	ಮಡಿಕೇರಿ	951	468	1443
21	ಮಂಡ್ಯ	24824	1643	14622
22	ಮಂಗಳೂರು	35657	7593	13132
23	ಮೈಸೂರು	34030	2852	28120
24	ರಾಯಚೂರು	38789	2080	13279
25	ರಾಮನಗರ	9638	1059	18393
26	ಶಿವಮೊಗ್ಗ	92815	7055	13569
27	ತುಮಕೂರು	23338	2317	15527
28	ಉಡುಪಿ	17430	7409	7759
29	ಯಾದಗಿರಿ	15774	4269	7708
	ಒಟ್ಟು	**10,14,656**	**142096**	**491679**
	ಒಟ್ಟು	**16,48,431**		
	ಪಾವತಿಸಲಾಗಿರುವ ಒಟ್ಟು ಮೊತ್ತ	**824,21,55,000**		